(ಇಂದು ದಿನಾಂಕಃ 23-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ವಿ.ಆರ್.ಎಮ್. ವಕೀಲರಿಂದಃ**

ಅಪಘಾತ ಲಿಂಗಂಪಳ್ಳಿ ಬಳಿ ಆಗಿದೆ. ಅಪಘಾತ ಸ್ಥಳ ತೆಲಂಗಾಣ ರಾಜ್ಯಕ್ಕೆ ಸೇರಿದೆ ಎಂದರೆ ಸರಿ. ನಾನು ಚಿಂಚೋಳಿ ತಾಲೂಕು ವೆಂಕಟಾಪೂರುದವನು. ನಾನು ವೆಂಕಟಾಪೂರುದವನು ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ತೆಲಂಗಾಣ ನಿವಾಸಿ ಯಾಗಿದ್ದು, ಅಪಘಾತ ಕೂಡ ತೆಲಂಗಾಣ ದಲ್ಲಿ ಆಗಿದ್ದು ಮತ್ತು 1 ನೇ ಎದುರುದಾರ ಕೂಡ ತೆಲಂಗಾಣದಲ್ಲಿ ವಾಸ ಇದ್ರೂ ಕೂಡ ಕೊರ್ಟ ಫೀ ಉಳಿಸುವ ಸಲುವಾಗಿ ಇಲ್ಲಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತ 17-03-2024 ರಂದು ಆಗಿದೆ. ನಾನು ಬಡಾ ತಾಂಡಾದಿಂದ ಹೈದರಾಬಾದಿಗೆ ನಾನು ಮತ್ತು ನನ್ನ ಹೆಂಡತಿ ಮೋಟಾರು ಸೈಕಲಿನ ಮೇಲೆ ಹೋಗುತ್ತಿರುವಾ ಆಗಿದೆ. ನಾವು ಮುಂದೆ ಹೋಗುತ್ತಿರುವಾ ಹಿಂದಿನಿಂದ ಬಂದು ಡಿಕ್ಕಿ ಪಡಿಸಿದರು. ಬುಲೆಟ್ ಮೋಟರ್ ಸೈಕಲ್ ಬಂದು ಡಿಕ್ಕಿ ಪಡಿಸಿದೆ. ನನ್ನ ಡಿ.ಎಲ್ ಇದೆ. ನಾನು ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ನಾನು ಡಿ.ಎಲ್ ಇಲ್ಲದೆ ನಿರ್ಲಕ್ಷ ತನದಿಂದ ಮೋಟರ ಸೈಕಲನ್ನು ಚಾಲನೆ ಮಾಡಿದ್ದರಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಜ್ಯೋತಿ ಬಾಯಿ ನನ್ನ ಹೆಂಡತಿ. ನನ್ನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಪರಿಹಾರ ಸಿಗುವುದಿಲ್ಲ ಕಾರಣ ಬುಲೆಟ್ ವಿರುದ್ದ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ತೀರಿ ಹೋದಾಗ 22 ವರ್ಷ ವಯಸ್ಸು ಆಗಿತ್ತು. ಅವಳ ವಯಸ್ಸು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ. ನನ್ನ ಹೆಂಡತಿ ವಯಸ್ಸು 25 ಕ್ಕಿಂತ ಹೆಚ್ಚು ಇತ್ತು ಎಂದರೆ ಸರಿಯಲ್ಲ. 2 ನೇ ಅರ್ಜಿದಾರಳು ನನ್ನ ಅತ್ತೆ ಅಂದರೆ ನನ್ನ ಹೆಂಡತಿಯ ತಾಯಿ. ನಾನು ಮತ್ತು 2 ನೇ ಅರ್ಜಿದಾರರು ಮೃತರ ಆದಾಯದ ಮೇಲೆ ಅವಲಂಬಿತರು ಆಗಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ಹೆಂಡತಿ ಲೇಬರ ಕೆಲಸ ಮಾಡಿ ತಿಂಗಳಿಗೆ 25000 ಸಂಪಾದನೆ ಮಾಡುತ್ತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಂಪಾದನೆ ಮಾಡುತ್ತಿದ್ಧೆ, ನನ್ನ

ಹೆಂಡತಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತ ಆಗಿದ್ದರೂ ಪರಿಹಾರ ಪಡೆಯುವ ಉದ್ದೇಶದಿಂದ ಮೋಟಾರ ಸೈಕಲ್ ಟಿ.ಎಸ್ -15 ಎಫ್ ಎಚ್ -7942 ವಿರುದ್ದ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.